ನಾನು ಹೇಗೆ ಪರಿವರ್ತನೆಗೊಂಡೆ ಎನ್ನುವುದು! ಈಗಿನ ನನ್ನ ಸ್ಥಿತಿಯಲ್ಲಿ ನಾನು ಹೇಳಬಲ್ಲೆ, ನನ್ನದೆಂಬುದು ಏನೂ ಇಲ್ಲ ಎಂದು. ನನ್ನ ಬದುಕಿನ ಪಥವನ್ನು ಸ್ವಾಮೀಜಿಯವರೇ ನಿರ್ಧರಿಸಿದ್ದಾರೆ. ನನಗೆ ಜೀವನದಲ್ಲಿ ಯಾವುದೇ ಆಸೆ ಇಲ್ಲ. ನಾನು ಈ ರೀತಿ ಬದುಕುವುದೇ ಸ್ವಾಮೀಜಿಯವರ ಇಚ್ಛೆ ಕೂಡ. ಚಿಕ್ಕಮ್ಮ, ನಾನು ಸ್ವಾಮೀಜಿಯವರಿಗೆ ತಕ್ಕ ಶಿಷ್ಯೆಯಾಗುವಂತೆ ನನ್ನನ್ನು ಆಶೀರ್ವದಿಸು. ನನ್ನ ಉಳಿದ ಜೀವನ ಅವರ ಸಂದೇಶಗಳನ್ನು ಜನರಿಗೆ ತಲುಪಿಸುವ ಮಹಾತ್ಕಾರ್ಯದಲ್ಲಿಯೇ ಕಳೆಯಲಿ. ನನ್ನ ಬಂದುಬಳಗದವರ ಸೇವೆಯನ್ನು ಮಾಡುವಾಗ ಬಡವರು, ಅನಾಥರು, ಗತಿಹೀನರು, ನನ್ನ ಸೇವೆಯಿಂದ ವಂಚಿತರಾಗದೆ ಇರಲಿ. ನನಗೆ ಗೊತ್ತು, ನನಗಾವ ತೊಂದರೆಯೂ ಆಗದಂತೆ ಸ್ವಾಮೀಜಿ ನನ್ನನ್ನು ಕಾಪಾಡುತ್ತಾರೆ.

ಇಷ್ಟೆಲ್ಲ ವರ್ಷಗಳವರೆಗೆ ನಾನು ನನ್ನ ತಾಯಿಯನ್ನು ಸಂತೈಸುತ್ತಲೇ ಇದ್ದೇನೆ. ನೀವೂ ಕೂಡ ಅನಗತ್ಯವಾಗಿ ನನ್ನ ಬಗ್ಗೆ ಯೋಚಿಸಬೇಡಿ.

ಹಿರಿಯರಿಗೆ ನನ್ನ ಪ್ರಣಾಮಗಳು ಹಾಗೂ ಕಿರಿಯರಿಗೆ ನನ್ನ ಪ್ರೀತಿಯನ್ನು ತಿಳಿಸಿ.

ನಿಮ್ಮ ಪ್ರೀತಿಯ,

ಸುಗುಣಾಬಾಯಿ''

ಜೈಪುರದಲ್ಲಿ ವಾಸವಾಗಿದ್ದ ಸುಗುಣಾಬಾಯಿಯ ಚಿಕ್ಕಮ್ಮ ಜಯಲಕ್ಷ್ಮಿ ಮಾಥುರ, ಅವಳ ಪತ್ರವನ್ನು ಓದುತ್ತಿದ್ದಂತೆ ಕಂಬನಿ ತುಂಬಿದವರಾಗಿ, ಮಾತು ಹೊರಡದೆ ಗಂಭೀರವದನೆಯಾಗಿ ಕುಳಿತುಕೊಂಡರು.

ಆಳ್ವಾರಿನ ಜನರೆಲ್ಲ ಸುಗುಣಾಬಾಯಿಯನ್ನು ತಾಯಿಯಂತೆ ಪ್ರೀತಿಸುತ್ತ ಗೌರವಿಸಲಾರಂಭಿಸಿದರು. ಎಂತಹ ಕಠಿಣ ಸಮಯವಿದ್ದಾಗಲೂ ಅವಳು ನಿರ್ಭೀತಿಯಿಂದ ಮುನ್ನಡೆದು ರೋಗಿಗಳ ಸೇವೆ ಮಾಡುತ್ತಿದ್ದಳು ಹಾಗೂ ಆರೈಕೆ ನೀಡುತ್ತಿದ್ದಳು. ತನ್ನ ಕಾರ್ಯವನ್ನು ಹೆರಿಗೆಗಷ್ಟೇ ಸೀಮಿತವಾಗಿರಿಸದೆ, ಹುಟ್ಟಿದ ಮಗುವಿಗೂ ಬಟ್ಟೆಬರೆ ನೀಡಿ ಮಗುವಿನ ಆರೋಗ್ಯದತ್ತ ಕೂಡ ನಿಗಾ ವಹಿಸುತ್ತಿದ್ದಳು.

ಸುಗುಣಾಬಾಯಿಯ ಜೀವನ ಹಾಗೂ ಸೇವಾಮನೋಭಾವಗಳಿಂದ ಅತ್ಯಂತ ಪ್ರಭಾವಿತಳಾಗಿ ತನ್ನ ಬದುಕನ್ನೂ ಸ್ವಾಮೀಜಿಯವರ ಉಪದೇಶಗಳಂತೆಯೇ ನಡೆಸಿ, ತಾನೂ ಕೂಡ ವೈದ್ಯೆಯಾಗಿ ಕಾರ್ಯನಿರ್ವಹಿಸಬೇಕೆಂಬ ನಿರ್ಧಾರ ಕೈಗೊಂಡ ಅವಳ ಸ್ನೇಹಿತೆ ಶೀಲಾ ಮಾಥುರ ಕೂಡ ಲೇಡಿ ಡಫರಿನ್ ಆಸ್ಪತ್ರೆಯಲ್ಲಿಯೇ ವೈದ್ಯೆಯಾಗಿ ಕೆಲಸ ಪ್ರಾರಂಭಿಸಿದಳು. ಅವಳು ಸುಗುಣಬಾಯಿ ಕುರಿತಾಗಿ ಮಾತನಾಡುತ್ತ ''ಸ್ವಾಮೀಜಿಯವರ ಬಗ್ಗೆ ನಾನು ಬಹಳಷ್ಟು ವಿಷಯಗಳನ್ನು ಸುಗುಣಾ ಬಾಯಿಯಿಂದ ಕೇಳಿ ತಿಳಿದುಕೊಂಡಿದ್ದೇವೆ. ನನ್ನ ಬದುಕನ್ನೂ ಸ್ವಾಮೀಜಿಯವರು ತೋರಿದ ಮಾರ್ಗದಲ್ಲಿಯೇ ನಡೆಸುವಂತೆ ಅವಳೇ ನನಗೆ ಪ್ರೇರೇಪಿಸಿದ್ದಾಳೆ. ಮಹಿಳೆಯರ ಉದ್ಧಾರಕ್ಕಾಗಿ ದಿಟ್ಟತನದಿಂದ ಧ್ವನಿ ಎತ್ತಿ ಕಾರ್ಯಕೈಗೊಳ್ಳುವ ಏಕೈಕ ವ್ಯಕ್ತಿ ಎಂದರೆ ಸ್ವಾಮಿ ವಿವೇಕಾನಂದರು ಮಾತ್ರ ಎಂದು ಎಷ್ಟೋ ಸಾರಿ ನನಗೆ ತಿಳಿಸಿದ್ದಾಳೆ.''

ಒಮ್ಮೆ ಸುಗುಣಾಬಾಯಿ ಬಹುಮಾನ ವಿತರಣೆ ಮಾಡಲು ಒಂದು ಹೆಣ್ಣುಮಕ್ಕಳ ಶಾಲೆಗೆ ಅತಿಥಿಯಾಗಿ ಹೋಗಿದ್ದಳು. ಅವಳು ಮಕ್ಕಳನ್ನುದ್ದೇಶಿಸಿ ಮಾತನಾಡುತ್ತ ''ನೀವು ಆದರ್ಶ ನಾರಿಯರಾಗಬೇಕೆಂದರೆ, ನೀವು ನಿಮ್ಮ ಬದುಕಿನಲ್ಲಿ ಮಹತ್ತಾದ್ದನ್ನು ಸಾಧಿಸಬೇಕೆಂದರೆ ಅಥವಾ ದೇಶದ ಉತ್ತಮ ನಾಗರಿಕರಾಗಬೇಕೆಂದರೆ ನೀವುಗಳೆಲ್ಲ ಸ್ವಾಮಿ ವಿವೇಕಾನಂದರ ಜೀವನ ಮತ್ತು ಕಾರ್ಯಗಳ ಬಗ್ಗೆ ಓದಲೇಬೇಕು, ಹಾಗೂ ಅವರ ಆದರ್ಶಗಳನ್ನು ಅನುಸರಿಸಲೇಬೇಕು. ಸ್ವಾಮೀಜಿಯವರನ್ನು ಒಂದು ಪುಷ್ಪಕ್ಕೆ ಹೋಲಿಸಿದೆ ಅದು ಅಪೂರ್ಣವೆನಿಸುತ್ತದೆ. ತನ್ನ ಮೈಯನ್ನೇ ಸುಟ್ಟುಕೊಳ್ಳುತ್ತ ಸುತ್ತಲೂ ಸುಗಂಧ ಸೂಸುವ ಊದಿನ ಕಡ್ಡಿಯಂತೆ ಇತ್ತು ಸ್ವಾಮೀಜಿಯವರ ಜೀವನ. ಹೀಗೆಯೇ ಸ್ವಾಮೀಜಿ ತಮ್ಮ  ಶರೀರವನ್ನು ಸತತವಾಗಿ ನಮ್ಮನಿಮ್ಮಗಳಿಗೆ ಉನ್ನತ ಬದುಕಿನತ್ತ ನಡೆವ ಆದರ್ಶಗಳನ್ನು ಬಿತ್ತುವಲ್ಲಿ ಕಾರ್ಯಮಗ್ನವಾಗಿಸಿ ಗಂಧದ ಕೊರಡಿನಂತೆ ಸವೆದುಹೋದರು! ಅವರು ನಮ್ಮೆಲ್ಲರ ಬದುಕಿಗೆ ದಾರಿದೀಪ. ನಾವು ಅವರ ಆದರ್ಶಗಳನ್ನು ಅಳವಡಿಸಿಕೊಂಡು, ಇತರರಿಗೂ ಅವನ್ನು ತಲುಪಿಸುತ್ತ ಬಾಳೋಣ. ನಾವೆಲ್ಲ ಅವರಿಗೆ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸೋಣ.''

ವೈಷ್ಣವ ಪಂಥದವಳಾಗಿದ್ದ ಸುಗುಣಾಬಾಯಿ ಉತ್ತಮ ಹಾಡುಗಾರ್ತಿ ಕೂಡ ಆಗಿದ್ದರು. ಸ್ವಾಮೀಜಿಯವರು ಹಾಡಿದ ಒಂದು ಹಾಡು ಅವಳಿಗೆ ತುಂಬಾ ಪ್ರಿಯವಾಗಿತ್ತು. ಅದರ ಅರ್ಥ ಈ ರೀತಿಯಿದೆ: ''ನಾನು ಕಾವಿಯ ವಸ್ತ್ರ ಧರಿಸಿ, ಶಂಖದಿಂದ ಮಾಡಿದ ಕಿವಿಯೋಲೆ ಹಾಕಿಕೊಂಡು ತಪಸ್ವಿಯಾಗುವೆನು. ನಿಷ್ಠುರ ಹರಿ ಇರುವೆಡೆ ಹೋಗುವೆನು.'' ಬಂಗಾಳಿಯಲ್ಲಿ ಸ್ವಾಮೀಜಿ ಹಾಡಿದ ಹಾಡು ಹೀಗಿತ್ತು–'ಅಮಿ ಗೆರುವಾ ಬಾಶನ ಅಂಗೆತೆ ಪೋರಿಯೇ, ಶಂಖೆರೋ ಕುಂಡಲ ಪೋರಿ/ಜೋಗಿ ನೀರ ಬೇಷೇ ಜಾಬೊ ಶೆಇ ದೇಶೇ ಜೇಖಾನೆ ನಿತುರ ಹರಿ'

ಇದನ್ನು ಹಿಂದಿಗೆ ಅನುವಾದಿಸಿ ಹಾಡುತ್ತ ಸುಗುಣಾಬಾಯಿ ಆನಂದಿಸುತ್ತಿದ್ದಳು.

ಅವಳು ೧೯೩೦ನೆಯ ಇಸವಿಯಲ್ಲಿ ಸ್ವಲ್ಪ ಜಮೀನು ಖರೀದಿಸಿ, ಅಲ್ಲಿ ಒಂದು ಶ್ರೀಕೃಷ್ಣನ ಮಂದಿರ ನಿರ್ಮಾಣ ಮಾಡಿದಳು ಹಾಗೂ ಅಲ್ಲಿಯೇ ಒಂದು ಧರ್ಮ ಶಾಲೆಯನ್ನೂ ಕಟ್ಟಿಸಿದಳು.

ಸುಗುಣಾಬಾಯಿಯ ಸಮಗ್ರ ಜೀವನ ಸ್ವಾಮಿ ವಿವೇಕಾನಂದಮಯ ಜೀವನವೇ ಆಗಿತ್ತು ಎಂದರೆ ಅತಿಶಯೋಕ್ತಿ ಆಗಲಾರದು. ೧೯೪೦ನೆಯ ಇಸವಿಯಲ್ಲಿ ಅವಳಿಗೆ ಅರವತ್ತು ವರ್ಷ ವಯಸ್ಸಾಗಿತ್ತು. ಕೇವಲ ಅರುವತ್ತು ವಯಸ್ಸಿನವಳಿದ್ದಾಗಲೇ ಸ್ವಾಮಿ ವಿವೇಕಾನಂದರನ್ನು ನೆನೆಯುತ್ತ ಸುಗುಣಾಬಾಯಿ ಇಹಲೋಕ ಯಾತ್ರೆ ಮುಗಿಸಿ ಶ್ರೀರಾಮಕೃಷ್ಣ ಲೋಕಕ್ಕೆ ಪಯಣಿಸಿದಳು. ❋

# ಸ್ವಾಮಿ ಪ್ರಭವಾನಂದ (೧೮೯೩ - ೧೯೭೬)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

ಭಾಗ ೧

ನಾನು ಸ್ವಾಮಿ ಪ್ರಭವಾನಂದರನ್ನು ಕಲ್ಕತ್ತದ ಅದ್ವೈತ ಆಶ್ರಮದಲ್ಲಿ ಮೊದಲ ಸರಿ ಕಂಡದು ೧೯೫೯ರಲ್ಲಿ. ಆಗ ಅದ್ವೈತ ಆಶ್ರಮವು ವೆಲಿಂಗಟನ್ ಸ್ಕ್ವೇರ್‌ನಲ್ಲಿತ್ತು. ಅವರು ಐವರು ಸಂನ್ಯಾಸಿನಿಯರನ್ನು - ಪ್ರವ್ರಾಜಿಕ ಶಾರದಾಪ್ರಾಣಾ, ಪ್ರಭಾಪ್ರಾಣಾ, ಯೋಗಪ್ರಾಣಾ, ವರದಾಪ್ರಾಣಾ ಮತ್ತು ಸತ್ಯ ಪ್ರಾಣಾರನ್ನು ಕರೆದುಕೊಂಡು ಬಂದಿದ್ದರು. ನಾವು ಅವರಿಗೆಲ್ಲ ಉಪಾಹಾರ ನೀಡಿ ಸತ್ಕರಿಸಿದೆವು. ನಂತರ, ಅದೇ ವರ್ಷದ ದುರ್ಗಾಪೂಜೆಯ ಬಳಿಕ ನಾನು ಕಂಖಲ್‌ನಲ್ಲಿದ್ದಾಗಲೂ ಮಹಾ ರಾಜರನ್ನು ಭೇಟಿಯಾಗಿದ್ದೆ. ತದನಂತರ ೧೯೬೩ರಲ್ಲಿ ಸ್ವಾಮೀಜಿ ಯವರ ಜನ್ಮಶತಾಬ್ದಿಯ ಸಂದರ್ಭದಲ್ಲಿ, ಪಾರ್ಕ್ ಸರ್ಕಸ್‌ನಲ್ಲಿ ನಡೆದ ಅದ್ದೂರಿಯ ಸಮಾರಂಭದಲ್ಲಿ ಭಾಗವಹಿಸಲು ಅವರು ಭಾಷಣಕಾರರಾಗಿ ಬಂದಿದ್ದರು.

**೮.೦೧.೧೯೬೮, ಬೇಲೂರು ಮಠ**

ಸಾಧು-ಬ್ರಹ್ಮಚಾರಿಗಳ ಸಮ್ಮೇಳನದಲ್ಲಿ ಸ್ವಾಮಿ ಯತೀಶ್ವರಾ ನಂದರು ಅಧ್ಯಕ್ಷರಾಗಿದ್ದಾಗ, ಸ್ವಾಮಿ ಪ್ರಭವಾನಂದ, ಸ್ವಾಮಿ ನಿಖಿಲಾನಂದ, ಸ್ವಾಮಿ ರಂಗನಾಥಾನಂದ, ಸ್ವಾಮಿ ಪುಣ್ಯಾ ನಂದ, ಸ್ವಾಮಿ ಹಿರಣ್ಮಯಾನಂದ, ಸ್ವಾಮಿ ಲೋಕೇಶ್ವರಾನಂದ, ಸ್ವಾಮಿ ಸಂಬುದ್ಧಾನಂದ, ಸ್ವಾಮಿ ಸಿದ್ಧಾತ್ಮಾನಂದ ಮೊದಲಾದ ಹಿರಿಯ ಸಾಧುಗಳು ತಮ್ಮ ಭಾಷಣಗಳಲ್ಲಿ ತಮ್ಮತಮ್ಮ ನೆನಪು ಗಳನ್ನು ಮಾಡಿಕೊಂಡರು. ಆಗ ಟೇಪ್‌ರೆಕಾರ್ಡ್‌ರ್ ಇರಲಿಲ್ಲ. ನಾನು ನನ್ನ ಡೈರಿಯಲ್ಲಿ ಕೆಲವು ವಿಷಯಗಳನ್ನು ಬರೆದಿಟ್ಟು ಕೊಂಡೆ.

ಸ್ವಾಮಿ ಪ್ರಭವಾನಂದರು ಹೇಳಿದರು: ''ನಾನಾಗ ಮದ್ರಾಸಿ ನಲ್ಲಿದ್ದೆ; ರಾಜಾ ಮಹಾರಾಜರು ಅಲ್ಲಿಗೆ ಬಂದಿದ್ದರು. ತಿರು ವನಂತಪುರ ರಾಜನ ಇಬ್ಬರು ಹೆಣ್ಣು ಮಕ್ಕಳು ಠಾಕೂರರ ದರ್ಶನವನ್ನು ಪಡೆದಿದ್ದರು. ಅವರು ಮಹಾರಾಜರನ್ನು ಭೇಟಿ ಯಾಗಲೆಂದು ಬಂದಾಗ, ಅವರು ಅವರಿಗೆ ಮಂತ್ರದೀಕ್ಷೆಯನ್ನು ನೀಡಿದರು.''

೧೯೨೩ರಲ್ಲಿ ಅಮೆರಿಕಾಗೆ ಹೋಗುವ ಮುನ್ನ ಅವರು ಶರತ್ ಮಹಾರಾಜರನ್ನು ಕಾಣುವ ಸಲುವಾಗಿ 'ಉದ್ಬೋಧನ'ಕ್ಕೆ ಹೋಗಿದ್ದರು. ಆಗ ಶರತ್ ಮಹಾರಾಜರು ಹೇಳಿದರು, ''ಒಳ್ಳೆ ಯದು, ಹಾಗಾದರೆ ನೀನು ಏಳು ಸಮುದ್ರ, ಹದಿಮೂರು ನದಿ ಗಳನ್ನು ದಾಟಿ ಹೋಗುವೆ.'' ಮಹಾರಾಜರು ಸ್ವಲ್ಪ ಹೆದರಿ ದಂತಿದ್ದುದನ್ನು ಕಂಡು ಅವರೆಂದರು, ''ನೀನು ಠಾಕೂರರ ಕೆಲಸ ಮಾಡಲು ಹೋಗುತ್ತಿರುವೆ. ಆತಂಕಪಡಬೇಡ. ಉಳಿದದ್ದನ್ನೆಲ್ಲ ನಾವು ನೋಡಿಕೊಳ್ಳುತ್ತೇವೆ. ಅದರಲ್ಲಿ ನೀನು ಮಾಡಬೇಕಾದದ್ದು ಏನೂ ಇಲ್ಲ.''



ಮತ್ತೊಂದು ಸಂದರ್ಭದಲ್ಲಿ ಅಮೆರಿಕಾಗೆ ಹೋಗುವ ಮುನ್ನ ತಾವು ಶ್ರೀ 'ಮ' ಅವರನ್ನು ಭೇಟಿಯಾಗಲು ಹೋದ ದ್ದರ ಬಗ್ಗೆ ಸ್ವಾಮಿ ಪ್ರಭವಾನಂದಜಿ ಹೇಳಿದರು. ಶ್ರೀ 'ಮ' ಎಂದೂ ಸಾಧುಗಳಿಗೆ ತಮ್ಮ ಪಾದಸ್ಪರ್ಶ ಮಾಡಿ ನಮಸ್ಕರಿಸಲು ಬಿಡುತ್ತಿರಲಿಲ್ಲ. ಗೃಹಸ್ಥರಾಗಿದ್ದ ಅವರು ಸಂನ್ಯಾಸಾಶ್ರಮಕ್ಕೆ ತಕ್ಕ ಗೌರವವನ್ನು ನೀಡುತ್ತಿದ್ದರು. ಪ್ರಭವಾನಂದರು ಶ್ರೀ 'ಮ' ಅವರನ್ನು, ''ನೀವು ಕಣ್ಣು ಮುಚ್ಚಿ ನನಗಾಗಿ ಠಾಕೂರರ ಬಳಿ ಪ್ರಾರ್ಥಿಸಿ'' ಎಂದು ವಿನಂತಿಸಿಕೊಂಡರು. ಕೂಡಲೆ ಶ್ರೀ 'ಮ' ತಮ್ಮ ಕಣ್ಣುಗಳನ್ನು ಮುಚ್ಚಿ ಧ್ಯಾನ, ಪ್ರಾರ್ಥನೆಗಳನ್ನು ಮಾಡ ತೊಡಗಿದರು. ಆ ಸಂದರ್ಭದಲ್ಲಿ ಪ್ರಭವಾನಂದರು ಅವರ ಪಾದಸ್ಪರ್ಶ ಮಾಡಿ ಪ್ರಣಾಮ ಮಾಡಿದರು.

೧೯೬೩ರಲ್ಲಿ ಬೇಲೂರು ಮಠದಲ್ಲಿ ನಡೆದ ಸಾಧು ಸಮ್ಮೇ ಳನದಲ್ಲಿ ಪ್ರಭವಾನಂದರು ಹೇಳಿದ್ದರು: ''ಪಾಶ್ಚಾತ್ಯರು, 'ನೀವು

ದೇವರನ್ನು ನೋಡಿದ್ದೀರಾ?' ಎಂದು ಕೇಳಿದರೆ, 'ನಾನು ದೇವರ ಪುತ್ರನನ್ನು ನೋಡಿದ್ದೇನೆ' ಎಂದು ಹೇಳು – ಎಂದು ಮಹಾ ಪುರುಷಜೀ ನನಗೆ ಹೇಳಿದ್ದರು.''

ಈ ಮೀಟಿಂಗ್‌ನಲ್ಲಿ ಅವರು ಅಬ್ರಹಾಮ್ ಲಿಂಕನ್ ಅವರ ಕಥೆಯನ್ನು ಹೇಳಿದ್ದರು: ''ಲಿಂಕನ್ ಒಮ್ಮೆ ಕುದುರೆ ಗಾಡಿಯಲ್ಲಿ ಎಲ್ಲಿಗೋ ಹೋಗುತ್ತಿದ್ದರು. ಇದ್ದಕ್ಕಿದ್ದಂತೆ ರಸ್ತೆಯ ಬದಿಯಲ್ಲಿ ಮೇಲ್ಮುಖವಾಗಿ ಬಿದ್ದು ಒದ್ದಾಡುತ್ತಿದ್ದ ರೆಕ್ಕೆ ಹುಳವನ್ನು ನೋಡಿದರು. ಅದಕ್ಕೆ ಸ್ವಲ್ಪವೂ ಚಲಿಸಲಾಗುತ್ತಿರಲಿಲ್ಲ. ಲಿಂಕನ್ ತಮ್ಮ ಗಾಡಿಯನ್ನು ನಿಲ್ಲಿಸಿ ಕೆಳಗಿಳಿದು ಹುಳವನ್ನು ಕವುಚಿ ಅದು ಚಲಿಸುವಂತೆ ಮಾಡಿದರು. ''ನಾನು ಈ ಜೀವನದಲ್ಲಿ ಒಬ್ಬನೇ ಒಬ್ಬ ಮನುಷ್ಯನಿಗೆ, ಅಷ್ಟೇಕೆ? ಒಂದು ಕೀಟಕ್ಕೆ ಸಹಾಯ ಮಾಡಿದರೂ, ನನ್ನ ಜೀವನ ಧನ್ಯ !'' ಎಂದಿದ್ದರು.

೧೯೬೩ರಿಂದ ನಾನು ಹಾಲಿವುಡ್ ಕೇಂದ್ರದ ಸ್ವಾಮಿ ವಿದ್ಯಾತ್ಮಾನಂದರ ನಿಕಟ ಸಂಪರ್ಕಕ್ಕೆ ಬಂದೆ. ಆ ವರ್ಷ ಅವರು ಸಂನ್ಯಾಸವನ್ನು ಪಡೆದಿದ್ದು, ಶ್ರೀರಾಮಕೃಷ್ಣರ ಭಾವಚಿತ್ರಗಳ ಬಗ್ಗೆ ಸಂಶೋಧನೆ ನಡೆಸಿದ್ದರು. ಅದನ್ನು ನಾನು ಬಂಗಾಳಿಯಿಂದ ಇಂಗ್ಲಿಷಿಗೆ ತರ್ಜುಮೆ ಮಾಡಿ, ಈ ಕಾರ್ಯದಲ್ಲಿ ಅವರಿಗೆ ನೆರವಾಗಿದ್ದೆ. ಆ ಲೇಖನವು 'Vedanta and the West' ಪತ್ರಿಕೆಯ ೧೭೨ನೆಯ ಸಂಚಿಕೆಯಲ್ಲಿ ಪ್ರಕಟವಾಯಿತು. ಸ್ವಾಮಿ ಪ್ರಭವಾನಂದರಿಂದ ಸಂಪಾದಿಸಲ್ಪಟ್ಟ ಈ ಪತ್ರಿಕೆಯು ನನಗೆ ಅತ್ಯಂತ ಪ್ರಿಯವಾಗಿತ್ತು. ಹಾಲಿವುಡ್‌ನಿಂದ ಮಹಾರಾಜರು ತಮ್ಮ 'ಭಗವದ್ಗೀತೆ'ಯನ್ನು ತಮ್ಮ ಆಟೋಗ್ರಾಫ್‌ನೊಂದಿಗೆ ನನಗೆ ಕಳುಹಿಸಿದ್ದರು. ನಂತರ ನಾನು ಬೇಲೂರು ಮಠದ ಕಾರ್ಯಸಮಿತಿಯು ಸ್ಥಾಪಿಸಿದ ಹಾಲಿವುಡ್ ಕೇಂದ್ರದಲ್ಲಿ ಸ್ವಾಮಿ ಪ್ರಭವಾನಂದರ ಸಹಾಯಕನಾಗಿ ಕಾರ್ಯ ವಹಿಸಿಕೊಂಡೆ. ೧೧ ಜೂನ್ ೧೯೭೧ರಿಂದ ೮ ಜುಲೈ ೧೯೭೬ರ ತನಕ ನಾನು ಅವರ ಅತ್ಯಂತ ನಿಕಟವರ್ತಿಯಾಗಿದ್ದೆ. ಅವರು ನನ್ನನ್ನು ತಮ್ಮ ಪುತ್ರನಂತೆ ಕಾಣುತ್ತಿದ್ದರು. ಅವರೊಂದಿಗೆ ಕಳೆದ ೫ ವರ್ಷಗಳಲ್ಲಿ ಶ್ರೀಮಾತೆ ಹಾಗೂ ಠಾಕೂರರ ನೇರ ಶಿಷ್ಯಂದಿರ ಅದೆಷ್ಟು ವಿಷಯಗಳನ್ನು ಕೇಳಿದ್ದೆನೋ ಅವುಗಳಲ್ಲಿ ಕೆಲವನ್ನು ಇಲ್ಲಿ ಬರೆಯುತ್ತಿರುವೆ. ಮಿತಭಾಷಿಗಳಾದ ಅನೇಕ ಸಾಧುಗಳನ್ನು ಕಂಡಿದ್ದೇನೆ. ಆದರೆ ಪ್ರಭವಾನಂದರದು ಬಿಚ್ಚು ಹೃದಯ. ಭಾಷಣಗಳಲ್ಲಿ, ತರಗತಿಗಳಲ್ಲಿ, ಊಟದ ಟೇಬಲ್‌ನಲ್ಲಿ ಅವರು ತಮ್ಮ ಜೀವನದ ಬಗ್ಗೆ ಹಾಗೂ ಕಳೆದುಹೋದ ದಿನಗಳ ನೆನಪುಗಳನ್ನು ಹೇಳುತ್ತಿದ್ದರು. ಮಹಾರಾಜರ ಕಾರ್ಯದರ್ಶಿಯಾಗಿದ್ದ ಪ್ರವ್ರಾಜಿಕಾ ಆನಂದಪ್ರಾಣಾ ಅವುಗಳನ್ನೆಲ್ಲ ಸಂಗ್ರಹಿಸಿ ಅಪೂರ್ವ ಪುಸ್ತಕವೊಂದನ್ನು ತಯಾರಿಸಿದ್ದರು. ಅದನ್ನು ಮುದ್ರಿಸಲಾಗಲಿಲ್ಲ; ಖಾಸಗಿ ವಿನಿಮಯಕ್ಕಾಗಿ ಮಾತ್ರವೇ ಕೆಲವು ಪ್ರತಿಗಳನ್ನು ತಯಾರಿಸಿದ್ದರು.(ಈಗ ಅದು 'Light to the West' ಎಂಬ ಹೆಸರಿನಲ್ಲಿ ಹಾಲಿವುಡ್ ವೇದಾಂತ ಪ್ರೆಸ್‌ನಿಂದ ಪ್ರಕಟಿತವಾಗಿದೆ.) ಪುಸ್ತಕದಲ್ಲಿರುವ ಹೆಚ್ಚಿನ ಅಂಶವನ್ನು ನಾನು ಮಹಾರಾಜರಿಂದಲೇ ಕೇಳಿದ್ದೇನೆ; ಹಾಗೂ ಕೆಲವನ್ನು ಡೈರಿಯಲ್ಲಿ ಬರೆದುಕೊಂಡಿದ್ದೇನೆ. ಆನಂದಪ್ರಾಣಾ ಅವರ ಟಿಪ್ಪಣಿ ಹಾಗೂ ನನ್ನ ಡೈರಿ ಇವೆರಡನ್ನು ಸೇರಿಸಿ ಈ ಸ್ಮೃತಿಕಥೆಯನ್ನು ಬರೆದಿದ್ದೇನೆ.

ಸ್ವಾಮಿ ಪ್ರಭವಾನಂದರ ಪೂರ್ವಾಶ್ರಮದ ಹೆಸರು ಅವನಿ ಘೋಷ್. ಜನ್ಮಸ್ಥಳ ವಿಷ್ಣುಪುರ. ಹುಟ್ಟಿದ ವರ್ಷ – ೧೮೯೩. ೧೯೦೭ರಲ್ಲಿ ಅವರು ಶ್ರೀಮಾತೆಯವರ ದರ್ಶನವನ್ನು ಪಡೆದರು. ಅವರ ಸ್ಮೃತಿಕಥೆ ಹೀಗಿದೆ :

''ಒಂದು ಸಾಯಂಕಾಲ ನಾನು ನನ್ನ ಸ್ನೇಹಿತನೊಂದಿಗೆ ತಿರುಗಾಡಲು ಹೋಗಿದ್ದೆ. ಆರಾಮಗೃಹವೊಂದರ ಎದುರಿನ ವರಾಂಡದಲ್ಲಿ ಕಾವಿ ವಸ್ತ್ರವನ್ನುಟ್ಟ ಒಬ್ಬ ಸಾಧು ಹಾಗೂ ಕೆಲವು ಮಹಿಳೆಯರನ್ನು ನೋಡಿದೆ. ಕುತೂಹಲದಿಂದಲೆ ಕಾವಿ ತೊಟ್ಟ ಸಾಧುವಿಗೆ ಪ್ರಣಾಮ ಮಾಡಿದೆ. ಅವರು ಕೇಳಿದರು, 'ನೀನು ಶ್ರೀಮಾತೆಯವರ ದರ್ಶನವನ್ನು ಪಡೆಯಬೇಕೆಂದಿರುವೆಯಾ?' ಇದಕ್ಕೆ ಮೊದಲು ನಾನು 'ಶ್ರೀರಾಮಕೃಷ್ಣ ವಚನವೇದ'ವನ್ನು ಓದಿದ್ದೆ. ನಾನು ಕೇಳಿದೆ, 'ಇವರು ಶ್ರೀರಾಮಕೃಷ್ಣ ಪರಮಹಂಸರ ಪತ್ನಿಯೆ?' ಕೆಲವೇ ಅಡಿಗಳ ದೂರದಲ್ಲಿ ಶ್ರೀಮಾತೆಯವರು ಕುಳಿತಿದ್ದರು. ನನ್ನ ಮಾತುಗಳನ್ನು ಕೇಳಿದ ಸಾಧುಗಳು ನಗುತ್ತ ಹೇಳಿದರು, 'ಅದೋ! ಶ್ರೀಮಾತೆಯವರು ಕುಳಿತಿದ್ದಾರೆ. ನೀನು ಪ್ರಣಾಮ ಮಾಡು.' ನಾನು ತಾಯಿಯ ಪಾದಗಳನ್ನು ಸ್ಪರ್ಶಿಸಿ ನಮಸ್ಕರಿಸಿದೆ. ಅವರು ನನ್ನ ಗಲ್ಲವನ್ನು ತಮ್ಮ ಬೆರಳುಗಳಿಂದ ಸ್ಪರ್ಶಿಸಿ ತಮ್ಮ ತುಟಿಗಳಿಗೆ ಒತ್ತಿಕೊಂಡರು. ಭಾರತದಲ್ಲಿ ತಾಯಂದಿರು ಮಕ್ಕಳನ್ನು ಈ ರೀತಿ ಚುಂಬಿಸುತ್ತಾರೆ. ನಂತರ ನನ್ನನ್ನು ಕೇಳಿದರು, 'ಮಗು, ನಾನು ನಿನ್ನನ್ನು ಹಿಂದೆಂದಾದರೂ ಕಂಡಿದ್ದೆನೆ?' ನಾನೆಂದೆ, 'ಇಲ್ಲಮ್ಮ. ನೀವು ಬಹುಶಃ ನನ್ನ ಅಣ್ಣನನ್ನು ಕಂಡಿರುವಿರೇನೋ.' ''

ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರುಗಳಲ್ಲಿ ಅವರು ಮೊದಲು ಸ್ವಾಮಿ ಸುಬೋಧಾನಂದರನ್ನು ವಿಷ್ಣುಪುರದಲ್ಲಿ ಕಂಡಿದ್ದರು. ಅವರು ಖೋಕಾ ಮಹಾರಾಜರನ್ನು ಗೃಹಶಿಕ್ಷಕರ ಬಳಿಗೆ ಕರೆದುಕೊಂಡು ಹೋಗಿದ್ದರು. ಅವರು ಅತ್ಯಂತ ಭಕ್ತಿಯಿಂದ ಕೂಡಿದ್ದರು. ಖೋಕಾ ಮಹಾರಾಜರು ಅವರೊಂದಿಗಿದ್ದರು.

ಪ್ರಭವಾನಂದರ ಅಣ್ಣ (ಅಮೂಲ್ಯ) ಬೋಶಿ ಸೇನರ ಸಹಪಾಠಿಯಾಗಿದ್ದರು. ಬೋಶಿ ಸೇನ್ ಸ್ವಾಮೀಜಿಯವರ ಪ್ರಥಮ ಶಿಷ್ಯರೂ, ಸ್ವಾಮಿ ಸದಾನಂದರ ನಿಕಟ ಭಕ್ತರೂ ಆಗಿದ್ದರು. ಸದಾನಂದರು ಬೋಶಿ ಸೇನ್‌ರ ಮನೆಯಲ್ಲಿ ಕೆಲವೊಮ್ಮೆ ಇರುತ್ತಿದ್ದರು. ಸೇನ್ ಕುಟುಂಬದವರೂ, ಪ್ರಭವಾನಂದರ ಕುಟುಂಬದವರೂ ಪರಸ್ಪರ ಸಂಪರ್ಕದಲ್ಲಿದ್ದರು. ಪ್ರಭವಾನಂದಜಿ ಸ್ಮರಿಸುತ್ತಾರೆ: ''ನನಗಾಗ ೧೪ ವರ್ಷ ವಯಸ್ಸು. ಸ್ಕೂಲು ಮುಗಿದಾಗ ನಾನು ಸದಾನಂದರನ್ನು ನೋಡಲು ಹೋಗುತ್ತಿದ್ದೆ. ಒಂದು ದಿನ ಅವರು